ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಕೆ. ಹರೀಶ್ ಕುಮಾರ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 515 (669)

ಉತ್ತರಿಸಬೇಕಾದ ದಿನಾಂಕ : 17.12.2021

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನಲ್ಲಿರುವ ಪ್ರಸ್ತುತ ಅಸ್ತಿತ್ವದಲ್ಲಿರುವ ರೈತ ಸಂಘಗಳು ಎಷ್ಟು:	ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನಲ್ಲಿ ಪ್ರಸ್ತುತ 05 ರೈತ ಸಂಘಗಳು ಕರ್ನಾಟಕ ಸಂಘಗಳ ಕಾಯ್ದೆ 1960 ರಡಿ ನೋಂದಣಿಗೊಂಡು ಅಸ್ತಿತ್ವದಲ್ಲಿದ್ದು, ವಿವರ ಈ ಕೆಳಗಿನಂತಿವೆ: 1) ರೈತರ ಅಭಿವೃದ್ಧಿ ಸಂಘ ಸಾ:ಮಣೂರ 2) ಶ್ರೀ ಗುರುದತ್ತ ಫಾರಮರ್ಸ್ ಸೋಸೈಟಿ ಸಾ:ಚೌಡಾಪೂರ 3) ಶ್ರೇಯಸ್ ಕೃಷಿ ರೈತ ಸೇವಾ ಸಂಸ್ಥೆ ಸಾ:ಸಾಗನೂರ 4) ಶ್ರೀ ಗುರುಕೃಪಾ ಕೃಷಿ ರೈತ ಸಂಸ್ಥೆ ಸಾ:ದೇವಲಗಾಣಗಾಪೂರ 5) ರೈತ ಸೇವಾ ಸಂಘ ಸಾ:ಕರಜಗಿ
ಆ	ಅಫಜಲಪೂರ ತಾಲ್ಲೂಕಿನ ಕರಜಗಿ ಗ್ರಾಮದಲ್ಲಿ ಯಾವುದಾದರೂ ರೈತ ಸಂಘವು ಅಸ್ತಿತ್ವದಲ್ಲಿದೆಯೇ: ಅಥವಾ ರದ್ದಾಗಿದೆಯೇ: ಯಾವಾಗ ರದ್ದಾಗಿದೆ:	ಅಫಜಲಪೂರ ತಾಲ್ಲೂಕಿನ ಕರಜಗಿ ಗ್ರಾಮದಲ್ಲಿ ರೈತ ಸೇವಾ ಸಂಘವು ಅಸ್ತಿತ್ವದಲ್ಲಿರುತ್ತದೆ.
ಇ	ಕರಜಗಿ ಗ್ರಾಮದಲ್ಲಿ ರೈತ ಸಂಘಕ್ಕೆ ಸೇರಿದ ಯಾವುದಾದರೂ ಜಾಗ ಅಥವಾ ಕಟ್ಟಡ ಇದೆಯೇ? (ಮಾಹಿತಿ ನೀಡುವುದು)	ಕರಜಗಿ ಗ್ರಾಮದಲ್ಲಿ ರೈತ ಸೇವಾ ಸಂಘಕ್ಕೆ ಸೇರಿದ 60*40 ರ ಅಳತೆಯ ನಿವೇಶನ ಇರುತ್ತದೆ.

ಸಂಖ್ಯೆ: ಸಿಒ 95 ಸಿಎಸ್ಆರ್ 2021

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು